ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿರುವ ರಸ್ತೆಗಳು.

೧೧೯೭ ಶ್ರೀ ಬಿ.ಆರ್. ಗುರುದೇವ್, (ಸಕಲೇಶಪುರ)—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಎಷ್ಟು ಕಿ. ಮೀ. ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿರುತ್ತದೆ.

ಆ) ಈ ವರ್ಷದ ಆಯವ್ಯಯಂ ಪಟ್ಟಿಯಲ್ಲಿ ಈ ರಸ್ತೆಗಳ ಅಭಿವೃದ್ಧಿಗೆ ನಿಗಧಿಪಡಿಸಿರುವ ಹಣವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳವರು).—

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಒಟ್ಟು ೨೬೦ ಕಿ. ಮೀ. ಉದ್ದದ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿವೆ. ವಿವರಗಳು ಕೆಳಕಂಡಂತಿದೆ.

	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ	ಒಟ್ಟು ಉದ್ದ
ಆಲೂರು ತಾಲ್ಲೂಕು	——	೫೭.೦೦ ಕಿ.ಮೀ	೫೭ ಕಿ.ಮೀ.
ಸಕಲೇಶಪುರ ತಾಲ್ಲೂಕು	೨೫.೦೦ ಕಿ.ಮೀ	೧೭೮.೦೦ ಕಿ.ಮೀ	೨೦೩ ಕಿ.ಮೀ
ಒಟ್ಟು ಉದ್ದ	೨೫.೦೦ ಕಿ.ಮೀ	೨೩೫.೦೦ ಕಿ.ಮೀ	೨೬೦ ಕಿ.ಮೀ

ಆ) ಈ ವರ್ಷದ ಆಯವ್ಯಯಂ ಪಟ್ಟಿಯಲ್ಲಿ(ಯೋಜನೆ) ೬.೭೦ ಲಕ್ಷ ರೂ. ಗಳನ್ನು ಸಕಲೇಶಪುರ ತಾಲ್ಲೂಕಿನಲ್ಲಿ ೧೫ ಕಿ. ಮೀ ಉದ್ದಕ್ಕೆ ಡಾಂಬರೀಕರಣಕ್ಕೆ ನಿಗಧಿಗೊಳಿಸಲಾಗಿದೆ.

ಶ್ರೀ ಬಿ. ಆರ್. ಗುರುದೇವ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಆಲೂರು ತಾಲ್ಲೂಕಿನ ಮೇಜರ್ ಡಿಸ್ಟ್ರಿಕ್ಟ್ ರೋಡ್ ೫೭ ಕಿಲೋಮೀಟರ್ ಇದೆ ಎಂದು ಹೇಳಿದ್ದಾರೆ. ಸಕಲೇಶಪುರದ್ದು ೧೭೮ ಕಿಲೋಮೀಟರ್ ಇದೆ ಅಂತ ಹೇಳಿದ್ದಾರೆ. ಆ, ಪ್ರಶ್ನೆಯನ್ನು ನಾನು ಕೇಳಿರುವುದಕ್ಕೆ ಅವರ ಉತ್ತರದಲ್ಲಿ ೬.೭೦ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆಲೂರು ತಾಲ್ಲೂಕು ನಮ್ಮ ಹಾಸನ ಜಿಲ್ಲೆಯಲ್ಲಿ ಅತ್ಯಂತ ಹಿಂದುಳಿದಿರುವಂಥ ತಾಲ್ಲೂಕು. ಈ ತಾಲ್ಲೂಕಿನಲ್ಲಿ ಬರುವ ಎಲ್ಲ ರಸ್ತೆಗಳು ಸಾಮಾನ್ಯವಾಗಿ ಜಿಲ್ಲಾ ಪರಿಷತ್ತಿಗೆ ಸೇರಿದ್ದು, ಜಿಲ್ಲಾ ಪರಿಷತ್ತಿನಲ್ಲಿ ಹಣದ ಮುಗ್ಗಟ್ಟು ತೋರಿಸುತ್ತಿರುವುದರಿಂದ ಈ ತಾಲ್ಲೂಕಿಗೆ ಅನ್ಯಾಯ ಆಗುತ್ತಿದೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಏನೆಂದರೆ, ಆಲೂರು ತಾಲ್ಲೂಕಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವಂಥ ಜಿಲ್ಲಾ ಮುಖ್ಯ ರಸ್ತೆಗಳ ಒಂದು ಹೆಡ್‌ನಲ್ಲಿ ಇನ್ನೂ ಜಾಸ್ತಿ ಹಣ ಬಿಡುಗಡೆ ಮಾಡಿ ಆಲೂರು ತಾಲ್ಲೂಕಿನ ಅಭಿವೃದ್ಧಿ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.— ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯು ವಶದಲ್ಲಿರತಕ್ಕಂಥ ರಸ್ತೆ ಆಲೂರಿನಲ್ಲಿ ೫೭ ಕಿಲೋಮೀಟರ್. ಸಕಲೇಶಪುರದಲ್ಲಿ ೨೦೩ ಕಿಲೋಮೀಟರ್ ಇದೆ. ಇದರಲ್ಲಿ ಸಕಲೇಶಪುರ ತಾಲ್ಲೂಕಿನ ಮಂಜಿರಾಬಾದ್—ಸುಬ್ರಹ್ಮಣ್ಯ ರಸ್ತೆ ೯ರಿಂದ ೧೪ ಹಾಗೂ ೩೪ರಿಂದ ೪೪ ಕಿಲೋಮೀಟರ್‌ವರೆಗೆ ಡಾಂಬರು ಹಾಕಲಿಕ್ಕೆ ೬ಲಕ್ಷ ೭೦ ಸಾವಿರ ರೂಪಾಯಿಗಳನ್ನು ಪ್ಲಾನ್‌ನಲ್ಲಿ ಕೊಡಲಾಗಿದೆ. ಮತ್ತು ಮೇಂಟನೆನ್ಸ್ ಗ್ರ್ಯಾಂಟ್‌ನಲ್ಲಿ ಹೆಚ್ಚು ಹಣ ಸಿಬ್ಬಂದಿ ವೆಚ್ಚಕ್ಕೆ ಹೋಗುತ್ತದೆ ಮತ್ತು ಉಳಿದಿರುವುದನ್ನು ಮೇಂಟನೆನ್ಸ್‌ಗೆ ವಿನಿಯೋಗಿಸಲಾಗುತ್ತಿದೆ. ಇನ್ನೂ ಹೆಚ್ಚು ರಸ್ತೆಗಳನ್ನು ಸರ್ಕಾರ ವಹಿಸಿಕೊಂಡು ನಿರ್ವಹಿಸಬೇಕೆಂಬುದು ಮಾನ್ಯ ಸದಸ್ಯರ ಅಭಿಪ್ರಾಯ. ಆದರೆ ಈಗಾಗಲೇ ನಾವು ಕೆಲವೊಂದು ನಿಯಮಗಳನ್ನು ಮಾಡಿದ್ದೇವೆ. ಜಿಲ್ಲಾಪರಿಷತ್ತಿನವರು ಅವರ ಪ್ರಾಮುಖ್ಯತೆಯನ್ನು ಅರಿತು ನಮ್ಮ ಸರ್ಕಾರಕ್ಕೆ ಕೊಡುವುದಾದರೆ ಮಾತ್ರ ಈ ಪ್ರಶ್ನೆ ಉದ್ಭವಿಸುತ್ತದೆಯೆಂದು ತಮ್ಮ ಮೂಲಕ ಅವರಿಗೆ ತಿಳಿಯಪಡಿಸುತ್ತೇನೆ.

ಶ್ರೀ ಬಿ. ಆರ್. ಗುರುದೇವ್.— ಮಾನ್ಯ ಮಂತ್ರಿಗಳು ಸಕಲೇಶಪುರದ ಬಗ್ಗೆ ಹೇಳಿದರು. ಆಲೂರು ಬಗ್ಗೆ ಬಹುಶಃ ಇದು ರಾಜ್ಯದ ಹೆದ್ದಾರಿಯಲ್ಲ ಎನ್ನುವ ದೃಷ್ಟಿಯಿಂದ ಅವರು ತಿಳಿಸಿಲ್ಲ. ಈಗ ಆಲೂರು ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತು ಬಂದಾಗಿನಿಂದ ಕಣದಳ್ಳಿ—ಮಣ್ಣು ರೋಡ್ ಏನು

ಇದೆ. ಈ ರಸ್ತೆಯಲ್ಲಿ ಎತ್ತಿನ ಗಾಡಿ ಸಹ ಹೋಗುವುದಕ್ಕೆ ಆಗಂವುದಿಲ್ಲ. ಇದನ್ನು ಮಾನ್ಯ ಮಂತ್ರಿಗಳು ನೋಡಿದ್ದಾರೆ. ಅದನ್ನು ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಎಂದೂ ಹೇಳಿ ಸೇರಿಸಿದ್ದಾರೋ, ಇದರ ವ್ಯಾಪ್ತಿಯಲ್ಲೇ ಸರ್ಕಾರದ ವತಿಯಿಂದ ಈ ಒಂದು ರೋಡಿಗಾದರೂ ಇವರ ಆಲಾಪೆಯಿಂದ ರಿಪೇರಿ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.— ಅಧ್ಯಕ್ಷರೇ ಅದು ಈಗ ಜಿಲ್ಲಾಪರಿಷತ್ ರಸ್ತೆಯಾಗಿದೆ. ಅದನ್ನು ಮೇಲ್ದರ್ಜೆಗೆ ಏರಿಸಿ, ಲೋಕೋಪಯೋಗಿ ರಸ್ತೆಯಾಗಿ ಮಾಡುವಂತಹ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ. ಇದು ಮಂಜೂರಾತಿ ಆದನಂತರ, ಮಾನ್ಯ ಸದಸ್ಯರು ಕೊಟ್ಟ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ.

ಕುಂದಾಪುರ ಕ್ಷೇತ್ರದ ಕಸಬಾ ಕೋಡಿ ಕಡಲ್ಕೊರೆತದ ಬಗ್ಗೆ ತಡೆಗೋಡೆ ರಚನೆ

೧೦೪೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕುಂದಾಪುರ ಕ್ಷೇತ್ರದ ಕೋಡಿಯ ಕಡಲ್ಕೊರೆತಕ್ಕೆ ತಡೆಗೋಡೆ ರಚಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;

ಆ) ತಡೆಗೋಡೆ ರಚಿಸುವುದರಲ್ಲಿ, ಈ ಕಾಮಗಾರಿಯು ಯಾವಾಗ ಪ್ರಾರಂಭಗೊಳ್ಳುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು)—

ಅ) ಕುಂದಾಪುರ ತಾಲ್ಲೂಕು ಕಸಬಾ ಕೋಡಿಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ತಡೆಗೋಡೆ ನಿರ್ಮಾಣದ ಎರಡು ಕಾಮಗಾರಿಗಳಿಗೆ ೧೯೯೦–೯೧ನೇ ಬಜೆಟ್‌ನಲ್ಲಿ ಅವಕಾಶ ಮಾಡಲಾಗಿದೆ.

೧) ಮೊದಲನೇ ಕಾಮಗಾರಿಗೆ ಬಜೆಟ್ ಅಂದಾಜು ರೂ. ೧೦ ಲಕ್ಷಗಳಿದ್ದು ಬಜೆಟ್ ಅನುದಾನವು ರೂ. ೩.೫೫ ಲಕ್ಷಗಳಿರುತ್ತದೆ. ಸುಮಾರು ೧೨೦ ಮೀ. ಉದ್ದ ತಡೆಗೋಡೆ ನಿರ್ಮಿಸುವ ಸದರಿ ಕಾಮಗಾರಿಗಾಗಿ ಅಂದಾಜು ತಯಾರಿಸಲಾಗುತ್ತಿದೆ.

೨) ಎರಡನೇ ಕಾಮಗಾರಿಗೆ ಬಜೆಟ್ ಅಂದಾಜು ರೂ. ೧೦ ಲಕ್ಷಗಳಿದ್ದು ಬಜೆಟ್ ಅನುದಾನ ರೂ. ೨೫ ಸಾವಿರಗಳಿರುತ್ತದೆ.

ಆ) ಮೊದಲ ಕಾಮಗಾರಿಯನ್ನು ಬೀಚ್ ತಯಾರಾದಲ್ಲಿ ೧೯೯೦–೯೧ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಎರಡನೇ ಕಾಮಗಾರಿಯ ಅಂದಾಜು ತಯಾರಾಗಬೇಕಾಗಿದ್ದು ಅಂದಾಜು ತಯಾರಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಕುಂದಾಪುರ ಕ್ಷೇತ್ರದ ಕೋಡಿಯಲ್ಲಿ ಸಮುದ್ರ ಕೊರೆತಕ್ಕೆ ತಡೆಗೋಡೆ ರಚಿಸುವ ಬಗ್ಗೆ ಹಾಗೂ ಸರ್ಕಾರದ ಅನುದಾನದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಈ ತಡೆಗೋಡೆ ಕಟ್ಟಬೇಕಾದರೆ, ಒಂದು ತಾತ್ಕಾಲಿಕ ತಡೆಗೋಡೆ, ಇನ್ನೊಂದು ಶಾಶ್ವತ ತಡೆಗೋಡೆಯ ಅವಶ್ಯಕತೆ ಇದೆ. ತಾತ್ಕಾಲಿಕ ತಡೆಗೋಡೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಮತ್ತು ಮೊದಲನೇ ಮತ್ತು ಎರಡನೇ ಕಾಮಗಾರಿಗಳ ಬಗ್ಗೆ. ಒಂದಕ್ಕೆ ೩.೫೫ ಲಕ್ಷ ಮತ್ತೊಂದಕ್ಕೆ ಕೇವಲ ೨೫ ಸಾವಿರ ಅನುದಾನವನ್ನು ತಾವು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿದ್ದೀರಿ. ಈ ಕೆಲಸಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಮತ್ತೆ ಇದಕ್ಕೆ ಕೇವಲ ೨೫ ಸಾವಿರ ರೂಪಾಯಿಗಳು ಇರುವುದರಿಂದ, ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಈ ಸಮುದ್ರ ಕೊರೆತದಿಂದ ದಿನಬೆಳಗಾದರೆ, ಮನೆಗಳು, ರಸ್ತೆಗಳು, ತೆಂಗಿನ ಮರಗಳು ಕೊಚ್ಚಿ ಹೋಗುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಇದು ಹೆಚ್ಚಾಗಿ ಆಗುತ್ತಿದೆ. ಇದಕ್ಕೆ ತಕ್ಷಣ ತಾವು ಯಾವ ಪರಿಹಾರವನ್ನು ಕೊಡುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಕಸಬಾ ಕೋಡಿಯಲ್ಲಿ ತಾತ್ಕಾಲಿಕ ತಡೆಗೋಡೆ ನಿರ್ಮಾಣ ಮಾಡುವುದಕ್ಕೆ ಅಂದಾಜು ೧೦ ಲಕ್ಷ ಬೇಕಾಗಿರುತ್ತದೆ. ನಮ್ಮ ಆಯವ್ಯಯದಲ್ಲಿ ೩.೫೫ ಲಕ್ಷ ಅನುದಾನವನ್ನು ಇಟ್ಟು, ಮಂಜೂರಾತಿ ಮಾಡುತ್ತಿದ್ದೇವೆ. ಶ್ರೀಘ್ರದಲ್ಲಿಯೇ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ತಮ್ಮ ಮುಂದೆ ತಿಳಿಸಬಯಸುತ್ತೇನೆ.